# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

## ದಕ್ಷಿಣ ವಲಯ, ವಿಜಯನಗರ ಉಪ ವಿಭಾಗ

## ವಾರ್ಡ್ ನಂ. 157 : ವಿಜಯನಗರ

ದಿನಾಂಕ: 15.10.2022 ರಂದು 12.00 ಗಂಟೆಗೆ ಶ್ರೀ.ಡಿ.ಕೆ ಬಾಬು ನೋಡಲ್ ಅಧಿಕಾರಿ, ವಾರ್ಡ್ ನಂ.157 (ಹಳೆಯ ವಾರ್ಡ್ ನಂ. 123) ರವರ ಅಧ್ಯಕ್ಷತೆಯಲ್ಲಿ ಸಹಾಯಕ ಕಾರ್ಯಪಾಲಕ ಅಭಿಯಂತರರು, ವಿಜಯನಗರ ಉಪ ವಿಭಾಗ ಕಛೇರಿಯಲ್ಲಿ ನಡೆದ ಸಭೆಯ ನಡಾವಳಿಗಳು.

**ಸಭೆಯಲ್ಲಿ ಹಾಜರಿದ್ದವರು:**

| ಕ್ರಸಂ | ಹೆಸರು | ಪದನಾಮ |
|---|---|---|
| 1. | ಶ್ರೀ.ಡಿ.ಕೆ.ಬಾಬು | ವಾರ್ಡ್ ಸಮಿತಿ ಅಧ್ಯಕ್ಷರು ಮತ್ತು ನೋಡಲ್ ಅಧಿಕಾರಿ. |
| 2. | ಶ್ರೀ.ಎಸ್.ಕೆ.ಹೇಮಂತ್ ಕುಮಾರ್ | ಸದಸ್ಯ ಕಾರ್ಯದರ್ಶಿ ವಾರ್ಡ್ ಸಂಖ್ಯೆ: 157. |
| 3. | ಶ್ರೀಮತಿ.ಸುಜಾತ | ಹಿರಿಯ ಆರೋಗ್ಯ ಪರಿವೀಕ್ಷಕರು. |
| 4. | ಶ್ರೀಮತಿ.ಸಪ್ನ | ಕಿರಿಯ ಆರೋಗ್ಯ ಪರಿವೀಕ್ಷಕರು. |
| 5. | ಶ್ರೀಮತಿ.ಸುಮಿತ್ರ ಬಿ.ಎಸ್ | ಮೌಲ್ಯಮಾಪಕರು. |
| 6. | ಶ್ರೀ.ಮಂಜು. | Marshal ವಾ–157. |
| 7. | ಶ್ರೀಮತಿ.ನಾಗರತ್ನಮ್ಮ | L/W ವಾ–157. |
| 8. | ಶ್ರೀಮತಿ.ಸರಸ್ವತಿ | L/ W ವಾ–157. |
| 9. | ಶ್ರೀ.ಎನ್.ಟಿ.ಲಕ್ಷ್ಮಿನರಸಿಂಹಮ್ಮ | ತೋಟಗಾರಿಕೆ ಇಲಾಖೆ. |
| 10. | ಶ್ರೀ.ಕುಮಾರ್ | ವಾರ್ಡ್ ನಂ.123. |
| 11. | ಶ್ರೀ.ರಾಜು | ಸಾರ್ವಜನಿಕರು. |

### : ನಡಾವಳಿಯ ವರದಿ :

ಕಾರ್ಯದರ್ಶಿಗಳಾದ ಶ್ರೀ.ಎಸ್.ಕೆ.ಹೇಮಂತ್ ಕುಮಾರ್ ರವರು ಸಭೆಗೆ ಹಾಜರಾದ ನೋಡಲ್ ಅಧಿಕಾರಿಯವರಿಗೆ ಹಾಗೂ ಅಧಿಕಾರಿಗಳು ಮತ್ತು ನೌಕರರಿಗೆ ಸ್ವಾಗತ ಕೋರಿದರು.

1. BSVP Collage Gate, Bangalore 1, Pipeline road ರಸ್ತೆಗಳಲ್ಲಿ ರಸ್ತೆಗುಂಡಿ ಕಾಮಗಾರಿಯನ್ನು ನಿರ್ವಹಿಸಿರುವುದಾಗಿ ಕಾರ್ಯದರ್ಶಿ ರವರು ಸಭೆಯ ಗಮನಕ್ಕೆ ತಂದರು.

   **ಕ್ರಮ: ಸಹಾಯಕ ಅಂಭಿಯಂತರರು ವಾರ್ಡ್ ನಂ.123.**

2. 5ನೇ ಮತ್ತು 6ನೇ ಮುಖ್ಯರಸ್ತೆಯಲ್ಲಿ Sweeping ಕಾಮಗಾರಿಯನ್ನು ನಿರ್ವಹಿಸಲು ಹಿರಿಯ ಆರೋಗ್ಯ ಪರಿವೀಕ್ಷಕರು, ಕಿರಿಯ ಆರೋಗ್ಯ ಪರಿವೀಕ್ಷಕ ರವರಿಗೆ ಸೂಚಿಸಿದರು.

   **ಕ್ರಮ: ಕಿರಿಯ ಆರೋಗ್ಯ ಪರಿವೀಕ್ಷಕರು.**

3. ವಾರ್ಡ್ ನಂ.157 ರಲ್ಲಿ ಬರುವ ಎಲ್ಲಾ ಆಟದ ಮೈದಾನ ಹಾಗೂ ಮಕ್ಕಳು ಆಟ ಆಡುವ ಸಾಮಗ್ರಿಗಳು ಹಾಳಾಗಿದ್ದು, ಅದನ್ನು ಸರಿಪಡಿಸಿಕೊಡಲು ತೋಟಗಾರಿಕೆ ಇಲಾಖೆ ರವರು ಕೋರಿದರು.

   **ಕ್ರಮ: ಸ.ಕಾ.ಅ ಯೋಜನೆ (ದಕ್ಷಿಣ) ವಿಭಾಗ.**

4. ಮನುವನ Junction, Giraffe Park, Water Plant road ಮತ್ತು ವಿದ್ಯಾರಣ್ಯನಗರದ ಬಳಿ De-Silting ಕಾಮಗಾರಿಯನ್ನು ಪ್ರರಂಭಿಸಿರುವುದಾಗಿ ಕಾರ್ಯದರ್ಶಿ ರವರು ಸಭೆಯ ಗಮನಕ್ಕೆ ತಂದರು.

<u>ಕ್ರಮ: ಸಹಾಯಕ ಅಂಭಿಯಂತರರು ವಾರ್ಡ್ ನಂ.123.</u>

5. GT Mall ಕಂದಾಯ ವಸೂಲಾತಿ ಬಗ್ಗೆ ಚರ್ಚಿಸಲಾಗಿ, ನ್ಯಾಯಾಲಯದಲ್ಲಿ ಹೂಡಿರುವ ದಾವೆಯ ಬಗ್ಗೆ ಮುಂದಿನ ಸಭೆಯಲ್ಲಿ ಮಾಹಿತಿ ನೀಡಲು ಕಂದಾಯ ಅಧಿಕಾರಿಗಳಿಗೆ ನೋಡಲ್ ಅಧಿಕಾರಿ ರವರು ಸೂಚಿಸಿದರು.

<u>ಕ್ರಮ: ಸಹಾಯಕ ಕಂದಾಯ ಅಧಿಕಾರಿ.</u>

6. Aadhar Card ನ್ನು Voter ID card ಗೆ Linking ಮಾಡುವ ಬಗ್ಗೆ ಸಾರ್ವಜನಿಕರಿಗೆ ತಿಳುವಳಿಕೆ ನೀಡಿ ಹಾಗೂ Banners ಗಳನ್ನು ಅಳವಡಿಸುವಂತೆ ನೋಡಲ್ ಅಧಿಕಾರಿ ರವರು ಮೌಲ್ಯಮಾಪಕರಿಗೆ ಸೂಚಿಸಿದರು.

<u>ಕ್ರಮ: ಸಹಾಯಕ ಕಂದಾಯ ಅಧಿಕಾರಿ.</u>

7. Plastic ನಿಷೇಧದ ವಿಚಾರದ ಬಗ್ಗೆ ಚರ್ಚಿಸಲಾಗಿ, ಸಾರ್ವಜನಿಕರಿಗೆ ತಿಳುವಳಿಕೆ ನೀಡುವಂತೆ ಹಾಗೂ Marshal (ವಾ–157) ರವರು ದಂಢ ವಿಧಿಸಿರುವುದಾಗಿ ನೋಡಲ್ ಅಧಿಕಾರಿಯವರ ಗಮನಕ್ಕೆ ತಂದರು.

<u>ಕ್ರಮ: ಕಿರಿಯ ಆರೋಗ್ಯ ಪರಿವೀಕ್ಷಕರು ಮತ್ತು Marshal (ವಾ–157)</u>

ಕೊನೆಯದಾಗಿ ಮಾನ್ಯ ನೋಡಲ್ ಅಧಿಕಾರಿ ರವರು ಸಭೆಗೆ ಹಾಜರಾದ ಎಲ್ಲಾ ಅಧಿಕಾರಿ/ನೌಕರರಿಗೆ ವಂದನೆಯನ್ನು ತಿಳಿಸುತ್ತಾ ಇನ್ನು ಮುಂದೆಯೂ ಈ ಸಭೆಗಳಲ್ಲಿ ಪೂರ್ವತಯಾರಿಯೊಂದಿಗೆ ಪಾಲ್ಗೊಂಡು ವಾರ್ಡಿನ ಕುಂದುಕೊರತೆಗಳತ್ತ ಗಮನಹರಿಸಿ ವಾರ್ಡ್ ಅಭಿವೃದ್ಧಿ ಪಡಿಸಲು ಸಹಕಾರ ನೀಡಬೇಕೆಂದು ಮನವಿ ಮಾಡಿದರು.

ಸದಸ್ಯ ಕಾರ್ಯದರ್ಶಿ ಹಾಗೂ ಸಹಾಯಕ ಅಭಿಯಂತರರಾದ ಶ್ರೀ.ಎಸ್.ಕೆ.ಹೇಮಂತ್ ಕುಮಾರ್ ರವರು ಸಭೆಗೆ ಹಾಜರಾದ ಎಲ್ಲಾ ಅಧಿಕಾರಿಗಳು/ನೌಕರರಿಗೂ ವಂದನೆಯನ್ನು ತಿಳಿಸುವುದರೊಂದಿಗೆ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

**ಸದಸ್ಯ ಕಾರ್ಯದರ್ಶಿ–ವಾರ್ಡ್ 157**
**ಹಾಗೂ ಸಹಾಯಕ ಅಭಿಯಂತರರು,**

**ನೋಡಲ್ ಅಧಿಕಾರಿ ವಾರ್ಡ್–157**

**<u>ಪ್ರತಿಯನ್ನು:-</u>**

1) ಜಂಟಿ ಆಯುಕ್ತರು, ದಕ್ಷಿಣ ವಲಯ, ಬಿಬಿಎಂಪಿ ರವರ ಅವಗಾಹನೆಗಾಗಿ ಕಳುಹಿಸಿದೆ.
2) ಕಾರ್ಯಪಾಲಕ ಅಭಿಯಂತರರು (ವಿಜಯನಗರ ವಿಭಾಗ) ರವರ ಮಾಹಿತಿಗಾಗಿ ಕಳುಹಿಸಿದೆ.
3) ಸಹಾಯಕ ಕಾರ್ಯಪಾಲಕ ಅಭಿಯಂತರರು (ವಿಜಯನಗರ) ರವರ ಮಾಹಿತಿಗಾಗಿ ಕಳುಹಿಸಿದೆ.
4) ಸಹಾಯಕ ಕಂದಾಯ ಅಧಿಕಾರಿ (ವಿಜಯನಗರ) ರವರ ಮಾಹಿತಿಗಾಗಿ ಕಳುಹಿಸಿದೆ.
5) ಹಿರಿಯ/ಕಿರಿಯ ಆರೋಗ್ಯ ಪರಿವೀಕ್ಷಕರು ವಾರ್ಡ್ ನಂ.157 ರವರ ಮಾಹಿತಿಗಾಗಿ
6) ಸಹಾಯಕ ಅಭಿಯಂತರರು (ವಿದ್ಯುತ್ ಬೆಸ್ಕಾಂ) ರವರ ಮಾಹಿತಿಗಾಗಿ ಹಾಗೂ ಸೂಕ್ತ ಕ್ರಮಕ್ಕಾಗಿ
7) ಸಹಾಯಕ ಅಭಿಯಂತರರು ವಿದ್ಯುತ್ (ಬೀದಿ ದೀಪ) ಬಿಬಿಎಂಪಿ ರವರ ಮಾಹಿತಿಗಾಗಿ ಸೂಕ್ತ ಕ್ರಮಕ್ಕಾಗಿ
8) ಕಛೇರಿ ಕಡತಕ್ಕೆ.